ದಿನಾಂಕಃ 03.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ 10 ನೇ ಪ್ರತಿವಾದಿಯ ಪರ ಶ್ರೀ. ಎ ಸಿ ಡಿ ವಕೀಲರಿಂದಃ**

ರಾಯಪ್ಪ ತೀರಿಕೊಂಡು ಸುಮಾರು 50-60 ವರ್ಷಗಳಾಗಿರಬಹುದು. ರಾಯಪ್ಪ ತೀರಿಕೊಳ್ಳುವ ಕಾಲಕ್ಕೆ 1 ನೇ ಪ್ರತಿವಾದಿಯ ಮಕ್ಕಳಾದ ಅಶೋಕ ಮತ್ತು ಒಬ್ಬಳು ಹೆಣ್ಣುಮಕ್ಕಳ ಜನನ ಆಗಿತ್ತು, ಆದರೆ ಅವಳ ಹೆಸರು ಹೇಳಲು ಆಗುವುದಿಲ್ಲ. ಮೃತ ರಾಯಪ್ಪ ಮತ್ತು ಆತನ ಹೆಂಡತಿ ಗೋಕಾಕ ಮಿಲ್ ನಲ್ಲಿ ಕೂಲಿ

ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಮೃತ ರಾಯಪ್ಪ ಹಾಗೂ ಆತನ ಹೆಂಡತಿ ಶಿವಕ್ಕ ಇವರಿಗೆ ಯಾವುದೇ ಆಸ್ತಿಯನ್ನು ಖರೀದಿ ಮಾಡುವ ಆರ್ಥಿಕ ಸಾಮರ್ಥ್ಯ ಇರಲಿಲ್ಲ ಎಂದರೆ ಸಾಕ್ಷಿಯು ಅವರಿಗೆ ಮೂಲತಃ ಆಸ್ತಿ ಇತ್ತು ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿ ಆದಾಯ ತೆರಿಗೆಯನ್ನು ಪಾವತಿಸಲು ತೊಂದರೆಯಾಗುತ್ತದೆ ಎನ್ನುವ ಕಾರಣಕ್ಕಾಗಿ ಮೃತ ರಾಯಪ್ಪ ಹಾಗೂ ಆತನ ಹೆಂಡತಿ ಶಿವಕ್ಕಳ ಹೆಸರಿಗೆ ಆಸ್ತಿ ಖರೀದಿಸಿರುತ್ತಾನೆಂದರೆ ನನಗೆ ಗೊತ್ತಿಲ್ಲ.

ಅಶೋಕನಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಅದೆ ರೀತಿ ರಾಜೇಂದ್ರನಿಗೆ ಎಷ್ಟು ಮಕ್ಕಳು ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಪ್ರಸ್ತುತ ಯಾರ ಹೆಸರಿಗೆ ಇರುತ್ತವೆ ಎಂದು ನನಗೆ ಹೇಳಲು ಆಗುವುದಿಲ್ಲ ಆದರೆ ಸಾಮೂಹಿಕ ಆಸ್ತಿ ಇರುತ್ತದೆಂದು ನುಡಿಯುತ್ತಾರೆ.

ದಾವಾ ಆಸ್ತಿ ಶೆಡ್ಯೂಲ್ ಬಿ ನೇದ್ದರಲ್ಲಿಯ ಅ. ಕ್ರ. ಸಂಖ್ಯೆ -3 ಮನೆ ಮತ್ತು ಖುಲ್ಲಾ ಜಾಗೆ ಸಿ ಟಿ ಎಸ್ ನಂಬರ 1427/ಎ ನೇದ್ದನ್ನು 1, 3 ಮತ್ತು 7 ನೇ ಪ್ರತಿವಾದಿಯರು ಪ್ರಸ್ತುತ ಪ್ರಕರಣವನ್ನು ದಾಖಲಿಸುವ ಪೂರ್ವದಲ್ಲಿ ನಿರ್ವಾಣಿ ಎಂಬುವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಮಾರಾಟ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಆದ್ದರಿಂದ ನಿರ್ವಾಣಿಯವರು ಅವಶ್ಯಕ ಪಕ್ಷಗಾರರು ಇರುತ್ತಾರೆಂದರೆ ಸರಿಯಲ್ಲ.

ಅದೇ ರೀತಿ ದಾವಾ ಶೆಡ್ಯೂಲ್ -ಎ ನೇದ್ದರ ಪೈಕಿ ಅನುಕ್ರಮ ಸಂಖ್ಯೆ -24, 26 ಮತ್ತು 27 ನೇದ್ದವುಗಳನ್ನು ಸಹ 1, 3 ಮತ್ತು 7 ನೇ ಪ್ರತಿವಾದಿಯರು ಪ್ರಸ್ತುತ ಪ್ರಕರಣವನ್ನು ದಾಖಲಿಸುವ ಪೂರ್ವದಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಮಾರಾಟ ಮಾಡಿಲ್ಲ ಎಂದು ನುಡಿಯುತ್ತಾರೆ.

ಸನ್ 1982 ರಲ್ಲಿ ವಾಟ್ನಿಯಾದ ನಂತರ ಪ್ರತಿವಾದಿ ನಂಬರ 1, 3, 7, 10 ಹಾಗೂ ಮೃತ ಆನಂದ ತಮ್ಮ ತಮ್ಮ ಪಾಲಿಗೆ ಬಂದ ಆಸ್ತಿಗಳ ಮೇಲೆ ಸಾಲ ಪಡೆಯುವುದು, ತುಂಬುವುದು ಮಾಡುತ್ತಾ ಬಂದಿರುತ್ತಾರೆಂದರೆ ಸರಿಯಲ್ಲ. ಸನ್ 1982 ರ ವಾಟ್ನಿಯಲ್ಲಿ ಮೃತ ಆನಂದನ ಪಾಲಿಗೆ ಬಂದ ಆಸ್ತಿಗಳನ್ನು ಪ್ರಸ್ತುತ ಪ್ರಕರಣದಲ್ಲಿ ದಾವಾ ಆಸ್ತಿಗಳನ್ನಾಗಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿಯು ಎಲ್ಲಾ ಆಸ್ತಿಗಳು ಸಾಮೂಹಿಕವಾಗಿ ಇರುತ್ತವೆ ಎಂದು ನುಡಿಯುತ್ತಾರೆ.

ಮಹಾಂತೇಶ ಪಾಟೀಲ ಇವರ ವಿರುದ್ಧ 1 ನೇ ಪ್ರತಿವಾದಿಯು ಪಾಲು ವಾಟ್ನಿ ದಾವೆ ಸಲ್ಲಿಸಿದ್ದು, ಅವರ ಹಾಗೂ 1 ನೇ ವಾದಿಯ ತಂದೆಯ ಮಾತು ಕೇಳಿಕೊಂಡು ವಾದಿಯರ ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರದೆ ಇದ್ದರೂ ಸಹ ಸುಳ್ಳು ಸಂಗತಿಗಳುಳ್ಳ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ- ಪ್ರತಿವಾದಿ ನಂಬರ 11 ರವರ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಮಂಜೂರು ಮಾಡಿ, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ